ಶ್ರೀ ರಾಮಕೃಷ್ಣ ಹೆಗ್ಗಡೆ.—ಗ್ರಾಮ ಸ್ಥರು ನೂರಕ್ಕೆ ಹನ್ನೆರಡೂವರೆ ಭಾಗದಷ್ಟು ಕೊಡಬೇಕು. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಮೂಲ ಭೂತ ತತ್ವ ಜನತೆಯ ಸಹಕಾರದಿಂದ ಮಾಡಬೇಕು ಎನ್ನುವುದು. ಈ ಮೂಲಭೂತ ತತ್ವದಂತೆ ಹೋಗುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—ಕುಡಿಯುವ ನೀರಿನ ಸೌಕರ್ಯ ಇಲ್ಲದೇ ಇರತಕ್ಕ ಸಂದರ್ಭಗಳಲ್ಲಿ, ಜನ ಹಣ ಕೊಡುವುದಕ್ಕೆ ಮುಂದೆ ಬಾರದೇ ಇದ್ದ ಸಂದರ್ಭದಲ್ಲಿ ಅಂತಹ ಹಳ್ಳಿಗಳಲ್ಲಿ ಇದಕ್ಕಾಗಿ ಏನು ಏರ್ಪಾಡು ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ರೀತಿ ಹಣವನ್ನು ಕೊಡಬೇಕೆಂದು ನಿರ್ಬಂಧವಿಲ್ಲ. ಆ ಗ್ರಾಮದಲ್ಲಿರುವ ಸಂಸ್ಥೆಗಳು ಹಣ ಕೊಡಬಹುದು. ನೂರರಲ್ಲಿ ಹನ್ನೆರಡೂವರೆಯಷ್ಟು ಭಾಗದಷ್ಟು ಹಣದ ರೂಪವಾಗಿಯಾದರೂ ಕೊಡಬಹುದು, ಸಾಮಗ್ರಿಯ ರೂಪವಾಗಿ ಕೊಡಬಹುದು ಅಥವಾ ಶ್ರಮದ ರೂಪವಾಗಿ ಕೊಡಬಹುದು.

Entrusting the Repair Work of Village School Buildings to the Public Works Department.

*Q.—410. Sri S. V. RAME GOWDA (Malur).—

Will the Government be pleased to state :—

whether they intend to continue the practice of entrusting the work of repair, etc., of village school buildings to the Public Works Department as usual ?

A.—Sri RAMAKRISHNA HEGDE (Minister for Co-operation and Development).—

No.

ಶ್ರೀ ಎಸ್. ವಿ. ರಾಮೇಗೌಡ.—ನನ್ನ ಪ್ರಶ್ನೆಗೆ ಇಲ್ಲ ಎಂದು ಹೇಳಿದ್ದೀರಿ. ತಾಲ್ಲೂಕು ಬೋರ್ಡುಗಳಿಂದ ಶಾಲಾ ಕಟ್ಟಡಗಳ ರಿಪೇರಿ ಕೆಲಸವನ್ನು ಮಾಡಲು ಸಾಧ್ಯವಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ಕೂಲು ಕಟ್ಟಡಗಳ ರಿಪೇರಿ ವಿಚಾರದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯವನ್ನು ನೋಡಿದರೆ, ಆಶ್ಚರ್ಯ ಪಡಬೇಕಾಗಿದೆ. ಎಲ್ಲ ಕಟ್ಟಡಗಳ ಕೆಲಸವನ್ನೂ ತಾಲ್ಲೂಕು ಬೋರ್ಡುಗಳಿಗೇ ವಹಿಸಬೇಕೆಂದು ಮೇಲಿಂದ ಮೇಲೆ ಸರಕಾರಕ್ಕೆ ಒತ್ತಾಯ ಬರುತ್ತಿದೆ.

ಶ್ರೀ ಜಿ. ವೆಂಕಟೇಗೌಡ.—ಸರಕಾರಿ ಸ್ಕೂಲು ಕಟ್ಟಡಗಳ ಕೆಲಸವನ್ನು ಪಿ.ಡಬ್ಲ್ಯು.ಡಿ.ಗೆ ಏಕೆ ವಹಿಸಿ ಬಾರದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸರಕಾರದ ವಶದಲ್ಲಿರತಕ್ಕ ಕಟ್ಟಡಗಳಿಗೆ ಪ್ರತಿವರ್ಷವೂ ಎಷ್ಟು ಖರ್ಚಾಗುತ್ತದೋ ಅದನ್ನು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟು ಮೇಂಟೆನೆನ್ಸು ಕೆಲಸವನ್ನು ಅವರೇ ವಹಿಸಿಕೊಳ್ಳುತ್ತಾರೆ.

ಶ್ರೀ ಎ. ಎಂ. ದೇವ್.—ಶಾಲೆಗಳನ್ನು ಪೂರ್ತಿಯಾಗಿ ರಿಪೇರಿ ಮಾಡುವ ಅಂಶವನ್ನು ಸರಕಾರದವರು ಜಾಗ್ರತೆ ಪರೀಕ್ಷಿಸುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆದಷ್ಟು ಬೇಗ ಮಾಡಬೇಕೆಂದಿದೆ.

Sri S. RAJAGOPAL.—What is the amount you allot for the taluk boards for these repair works ?

Sri RAMAKRISHNA HEGDE.—So far, we have not transferred these schools to the taluk boards for maintenance. When we actually transfer, we will see as to what amount could be transferred for this purpose.

Supply of Power to the Villages in Ron Taluk, Dharwar District.

*Q.—164. Sri A. J. DODDAMETI (Ron).—

Will the Government be pleased to state :—

(*a*) the number and the names of village panchayats in Ron Taluk, Dharwar District, that have requested the Government for the supply of Electricity ;

(*b*) out of the above the number and the names of the villages that have already submitted the load survey forms duly filled up ;

(*c*) the number of villages mentioned in clause (*b*) that have been surveyed ;

(*d*) whether the plans and estimates of the surveyed villages have been forwarded to the Electricity Board for approval ;

(*e*) if so, when these estimates will be sanctioned ;

(*f*) whether they have taken any action to survey the villages in respect of those Village Panchayats which have not submitted load survey forms duly filled ;

(*g*) whether they have considered the proposal to draw the electric lines between Ron and Badami ;

(*h*) if so, whether the proposal will be implemented ?

A.—Sri J. H. SHAMSUDDIN (Deputy Minister for Electricity).—

(*a*) Twenty.

(1) Gajendragad (2) Naregal (3) Sudi (4) Hole Alur (5) Abbigare (6) Jakkali